ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ
ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 492/17**

ಪಿಡಬ್ಲ್ಯುಃ - 2
ಸಿಡಬ್ಲ್ಯುಃ - 20

ದಿನಾಂಕಃ 11.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಎಂ. ಕೆ. ಸದಾಶಿವ |
| ತಂದೆಯ ಹೆಸರು | - ಲೇಟ್ ಕುಜ್ಞಪ್ಪ |
| ವಯಸ್ಸು | - 62 ವರ್ಷ |
| ವೃತ್ತಿ | - ನಿವೃತ್ತ ಪಿ ಎಸ್ ಐ |
| ವಾಸಸ್ಥಳ | - ಮೂರ್ನಾಡು |

**<u>ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ</u>**

<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ</u>-

ನಾನು ದಿಃ 01.08.2014 ರಿಂದ 07.11.2014 ರವರೆಗೆ ಪಿ ಎಸ್ ಐ ಆಗಿ ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ08.08.2014 ರಂದು ಚಾಸಾ-1 ರಿಂದ 3 ರವರ ಕೋರಿಕೆ ಸಹಿ ಪಡೆಯುವ ಸಲುವಾಗಿ ಪಂಚರಾಗಬೇಕೆಂದು ಕೋರಿ ಚಾಸಾ-5 ಮತ್ತು 6 ರವರನ್ನು ಕರೆಸಿ ಅವರಿಗೆ ಪ್ರಕರಣದ ವಿದ್ಯಾಮಾನವನ್ನು ತಿಳಿಸಿ ನೋಟಿಸನ್ನು ಜಾರಿ ಮಾಡಿರುತ್ತೇನೆ. ನಂತರ ಚಾಸಾ-1 ರಿಂದ 3 ರವರ ಕೋರಿಕೆ ಸಹಿಯನ್ನು ತಲಾ 6 ಪುಟಗಳಿಗೆ(ಒಟ್ಟು 18 ಪುಟಗಳು) ಪಡೆದುಕೊಂಡಿರುತ್ತೇನೆ. ಅದಕ್ಕೆ ಕೆಂಪು ಶಾಹಿಯಿಂದ ಗುರುತು ಮಾಡಿ, ಆರ್- 49 ರಿಂದ 66 ಎಂದು ಗುರುತಿಸಿರುತ್ತೇನೆ. ಅದನ್ನು ಪ್ರತ್ಯೇಕವಾಗಿ 6-6-6 ರಂತೆ ಖಾಕಿ ಕವರ್ ಗೆ ಹಾಕಿ ಅರಗಿನಿಂದ N ಸೀಲು ಹಾಕಿರುತ್ತೇನೆ ಹಾಗೂ ನಂತರ ಚಾಸಾ-5 ಮತ್ತು 6 ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸಹಿಗಳನ್ನು ಮಾಲುಪಟ್ಟಿಗೆ ಅಳವಡಿಸಿಕೊಂಡು

ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದಿಃ 28.02.2014 ರಂದು ಪಿ ಸಿ 452 ಪುಟ್ಟರಾಜುರವರೊಂದಿಗೆ ಮೇಲೆ ಹೇಳಿದ ಸಹಿಗಳ ಪುಟಗಳನ್ನು ಎಫ್ ಎಸ್ ಎಲ್ ಗೆ ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಈ ಪ್ರಕರಣದ ಕಡತವನ್ನು ಚಾಸಾ-21 ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿಗೆ ಮೂರು ದಾಖಲೆಗಳನ್ನು ತೋರಿಸಲಾಗಿದ್ದು, ಅವು ದಿಃ08.08.2014 ರ ಮೂರು ಮಹಜರಾಗಿದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಪಿ-2 ರಿಂದ 4 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿಗಳನ್ನು ಕೂಡ ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-2(ಎ), 3(ಎ), 4(ಎ) ಎಂದು ಗುರುತಿಸಲಾಯಿತು. ಚಾಸಾ-1 ರಿಂದ 3 ರವರಿಂದ ಪಡೆದುಕೊಂಡು ಸಹಿಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ಆರ್- 49 ರಿಂದ ಆರ್- 66 ಸಹಿಗಳನ್ನು ನೋಡಿ ಗುರುತಿಸಿದ್ದು, ಇದನ್ನು ಸಾಂಕೇತಿಕವಾಗಿ ನಿಪಿ-5 ಎಂದು ಗುರುತಿಸಲಾಯಿತು.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ., ಮಡಿಕೇರಿ.**